ಪತ್ರಿಕಾ ತುಣುಕುಗಳು

**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 6/2/2021

# ಬಿಎಸ್‌ವೈಗೆ ಮೋದಿ ಅಮಿತ್ ಶಾ ಗುರಾಣಿ

## ಸವಾಲು ಎದುರಿಸಿಯೇ ಸಿಎಂ । ಯಾರೂ ಏನೂ ಮಾಡಲಾಗಲ್ಲ

ಸಂಕ 6/2/21

ವಿಧಾನಸಭೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ವಿಧಾನ ಸಭೆಯಲ್ಲಿ ಅಕ್ಷರಶಃ ಗುಡುಗಿದರು. ನನ್ನನ್ನು ಯಾರೂ ಏನು ಮಾಡಲು ಆಗಲ್ಲ, ನನ್ನ ಮೇಲೆ 100 ಕೇಸ್ ಹಾಕಿದ್ರೂ ಎದುರಿಸುವ ಶಕ್ತಿಯಿದೆ. ಸಿದ್ದರಾಮಯ್ಯ ಅವರೇ ನಿಮಗೆ ಶಕ್ತಿ, ತಾಕತ್ತು ಇದ್ದರೆ ಬರುವ ಉಪ ಚುನಾವಣೆ ಮತ್ತು ಮುಂದಿನ ವಿಧಾನಸಭಾ ಚುನಾವಣೆ ಗೆದ್ದು ಬನ್ನಿ ಎಂದು ಸವಾಲೆಸೆದರು.



- ಸಿದ್ದರಾಮಯ್ಯ ಆರೋಪಕ್ಕೆ ತಿರುಗೇಟು
- ವಿಧಾನಸಭೆಯಲ್ಲಿ ಬಿಎಸ್‌ವೈ ಗುಡುಗು
- ಸಾಧನೆ ಹೇಳುತ್ತಲೇ ಸವಾಲಿಗೆ ಆಹ್ವಾನ
- ಉತ್ತರಕ್ಕೆ ಅತೃಪ್ತಿ-ಕಾಂಗ್ರೆಸ್ ಸಭಾತ್ಯಾಗ
- 100 ಕೇಸ್ ಹಾಕಿದ್ರೂ ಎದುರಿಸುವ ಶಕ್ತಿ
- ತಾಕತ್ತಿದ್ರೆ ವಿಧಾನಸಭೆ ಚುನಾವಣೆ ಗೆಲ್ಲಿ
- ಶೇ. 85ರಷ್ಟು ಸಾಧನೆ ಸರ್ಕಾರದ ಗುರಿ

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಶುಕ್ರವಾರ ವಿಧಾನಸಭೆಯಲ್ಲಿ ಉತ್ತರಿಸಿದ ಅವರು, ಎಲ್ಲಿಯವರೆಗೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಜನರ ಆಶೀರ್ವಾದ ಇರುತ್ತದೆಯೋ ಅಲ್ಲಿಯವರೆಗೆ ಅಧಿಕಾರದಲ್ಲಿ ಇರುತ್ತೇನೆ. ಅಲ್ಲಿಯವರೆಗೂ ನನ್ನನ್ನು ಯಾರೂ ಏನು ಮಾಡಲಾಗದು. ಸವಾಲಿನಿಂದಲೇ 4 ಬಾರಿ ಸಿಎಂ ಆಗಿದ್ದೇನೆ. ಎಷ್ಟೇ ಕೇಸು ಹಾಕಿದರೂ ಎದುರಿಸುವ ಶಕ್ತಿ ಇದೆ. ಪ್ರಾಮಾಣಿಕವಾಗಿ ಇದ್ದೇನೆ ಎಂಬುದನ್ನು ಸಾಬೀತುಪಡಿಸುತ್ತೇನೆ ಎಂದು ಯಡಿಯೂರಪ್ಪ ಹೇಳಿದರು.

ರಾಜ್ಯಪಾಲರ ಭಾಷಣ ಸುಳ್ಳಿನ ಕಂತೆ ಎಂದು ಹೇಳಿದ್ದೀರಿ. ನಮ್ಮದು ಅನೈತಿಕ ಸರ್ಕಾರ ಎಂದಿದ್ದೀರಿ. ಆದರೆ, ಬಹುಮತ ಇಲ್ಲದಿದ್ದರೂ ನೀವು ಜೆಡಿಎಸ್ ಜೊತೆಗೆ ಸರ್ಕಾರ ನಡೆಸಿದ್ದು ಅನೈತಿಕ ಅಲ್ಲವೇನು ಎಂದು ಪ್ರತಿಪಕ್ಷ ನಾಯಕರನ್ನು ಪ್ರಶ್ನಿಸಿದರು. ಆಪರೇಷನ್ ಕಮಲದ ಜನಕ ಯಡಿಯೂರಪ್ಪ ಅಂದಿದ್ದೀರಿ.

ಆದರೆ ನೀವು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರ್ಪಡೆಯಾಗಿದ್ದು ಆಪರೇಷನ್ ಅಲ್ಲವೇ ಎಂದು ಪ್ರಶ್ನಿಸಿದ ಬಿಎಸ್‌ವೈ, ನಿಮ್ಮ ಸರ್ಕಾರ ರಸ್ತೆಯಲ್ಲಿ ಕೆಟ್ಟು ನಿಂತ ಡಕೋಟಾ ಎಕ್ಸ್‌ಪ್ರೆಸ್ ಎಂದಿದ್ದನ್ನು ಉಲ್ಲೇಖಿಸಿ, ಟೀಕೆಗಳು ರಚನಾತ್ಮಕವಾಗಿರಲಿ ಎನ್ನುತ್ತಲೇ ರಾಜ್ಯ ಸರಕಾರದ ಸಾಧನೆಗಳನ್ನು ಸದನಕ್ಕೆ ಅಂಕಿ-ಸಂಖ್ಯೆಗಳ ಸಮೇತ ವಿವರಿಸಿದರು.

ನನ್ನ ವಿರುದ್ಧ ಅನೇಕ ಪ್ರಕರಣ ಇವೆ. ಆದರೆ, ನಾನು ವಕೀಲ ಅಲ್ಲ. ನಿಮಗೆ ಇರುವಷ್ಟು ಬುದ್ಧಿವಂತಿಕೆಯೂ ನನಗಿಲ್ಲ. ನಿಮ್ಮ ಅಧಿಕಾರ ಅವಧಿಯಲ್ಲಿ ರೀಡೂ ಮಾಡಿದ್ದೀರಿ, ತನಿಖಾ ಸಂಸ್ಥೆಗಳಿಂದ 'ಬಿ' ರಿಪೋರ್ಟ್ ಹಾಕಿಸಿಕೊಂಡಿರಿ. ಇನ್ನೂ ಏನೇನು ಮಾಡಿದ್ದೀರಿ ಎಂಬುದು ಗೊತ್ತು. ನಿಮ್ಮ ರಾಷ್ಟ್ರೀಯ ಮುಖಂಡರ ಮೇಲೆ ಆರೋಪ ಇಲ್ಲವೇನು. ಅವರೂ ಕೂಡಾ ಜಾಮೀನಿನಲ್ಲಿ ಇಲ್ಲವೇನು ಎಂದು ಸಿದ್ದರಾಮಯ್ಯ ಅವರನ್ನು ಯಡಿಯೂರಪ್ಪ ಖಾರವಾಗಿಯೇ ತರಾಟೆಗೆ ತೆಗೆದುಕೊಂಡರು. ಪ್ರವಾಹ, ಕೊರೊನಾ ಸಂದರ್ಭದಲ್ಲಿ ಹತ್ತು ಹಲವು ಸವಾಲುಗಳ ನಡುವೆಯೇ ದೇವರು ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದ್ದೇನೆ. ತೆರಿಗೆ ಸಂಗ್ರಹದಲ್ಲಿ ಸ್ವಲ್ಪ ಮಟ್ಟಿಗೆ ಹಿನ್ನಡೆ ಆಗಿದೆ ಎಂಬುದನ್ನು ಬಿಎಸ್‌ವೈ ಒಪ್ಪಿಕೊಂಡರು. ಎಲ್ಲ ಅಡೆತಡೆಗಳ ನಡುವೆಯೂ ವರ್ಷಾಂತ್ಯಕ್ಕೆ ಶೇ. 85ರಷ್ಟು ಸಾಧನೆ ಮಾಡಿಯೇ ತೀರುವುದಾಗಿ ಶಪಥಗೈದರು. ಆದರೆ ಸರ್ಕಾರದ ಉತ್ತರ ತೃಪ್ತಿಕೊಟ್ಟಿಲ್ಲ ಎಂದು ಆರೋಪಿಸಿ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

## ಆಯೋಗದ ಮಡಿಲಿಗೆ ಪಂಚಮಸಾಲಿ ವಿವಾದ

ಪಂಚಮಸಾಲಿ ಸಮಾಜವನ್ನು 2ಎ ಮೀಸಲಾತಿಗೆ ಸೇರಿಸುವ ಸಂಬಂಧ ಸಮಗ್ರ ಅಧ್ಯಯನ ವರದಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಿಳಿಸಿದ್ದಾರೆ. ಶುಕ್ರವಾರದ ಅಧಿವೇಶನದಲ್ಲಿ ನನ್ನ ಹೇಳಿಕೆಯನ್ನು ಶ್ರೀ ಜಯಮೃತ್ಯುಂಜಯ ಸ್ವಾಮೀಜಿಗಳು ಅಪಾರ್ಥ ಮಾಡಿಕೊಂಡಿದ್ದಾರೆ. ನಾನು ಇಂದಿನ ಅಧಿವೇಶನದಲ್ಲಿ ಹೇಳಿದ್ದೇನೆಂದರೆ 'ನಮ್ಮದೊಂದು ರಾಷ್ಟ್ರೀಯ ಪಕ್ಷವಾಗಿದ್ದರಿಂದ ಎಲ್ಲಾ ಸಂಸತ್ ಸದಸ್ಯರ ಜೊತೆ ಚರ್ಚಿಸಿ ಮುಂದೆ ರಾಷ್ಟ್ರೀಯ ನಾಯಕರೊಂದಿಗೆ ಈ ವಿಷಯದ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ. ನಮ್ಮ ಸರ್ಕಾರ ಈ ಹಿಂದೆ ಪಂಚಮಸಾಲಿ ಸಮಾಜವನ್ನು 3ಬಿ ಸೇರಿಸಿರುವುದನ್ನು ನೆನಪಿಸಿಕೊಳ್ಳಬಹುದಾಗಿದೆ ಎಂದರು. ರಾಜ್ಯದ ಸಿಎಂ ಆಗಿ ಎಲ್ಲಾ ಸಮುದಾಯಗಳ ಒಳಿತಿಗೆ ಬದ್ಧನಾಗಿರುತ್ತೇನೆ ಎಂದು ಸ್ಪಷ್ಟನೆ ನೀಡಿದ್ದಾರೆ.